**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 743/2024**

**ಸಿ.ಡಬ್ಲ್ಯೂಃ 9 , ಪಿ.ಡಬ್ಲ್ಯೂಃ 8**

ಸಾಕ್ಷಿದಾರನ ಹೆಸರು : ಕಿರಣ್ ಪಾಟೀಲ

ತಂದೆಯ ಹೆಸರು : ಗಣಪತಿ

ವಯಸ್ಸು : 28 ವರ್ಷ

ಉದ್ಯೋಗ : ಪೊಲೀಸ್ ಆರಕ್ಷಕ, ಭಟ್ಕಳ ನಗರ ಪೊಲೀಸ ಠಾಣೆ

ವಾಸ್ತವ್ಯ : ಪೊಲೀಸ್ ವಸತಿಗೃಹ, ಸಾಗರ ರಸ್ತೆ, ಭಟ್ಕಳ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 11/07/2025**

**ಮುಖ್ಯ ವಿಚಾರಣೆ : ಮಾನ್ಯ ಸರಕಾರಿ ಸಹಾಯಕ ಅಭಿಯೋಜಕರಿಂದ,**

ನಾನು ಭಟ್ಕಳ ಶಹರ ಠಾಣೆಯಲ್ಲಿ ದಿನಾಂಕಃ 15.07.2019 ರಿಂದ ಇವತ್ತಿನವರೆಗೆ ಪೊಲೀಸ್ ಆರಕ್ಷಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ದಿಃ 23.12.2023 ರಂದು ಚಾಸಾ –11 ರವರು ಮೃತ ಪಟ್ಟ ಜಾನುವಾರುಗಳ ಪಂಚನಾಮೆ ಮಾಡಲು ಆದೇಶಿಸಿದ್ದು ಅವರ ಜೊತೆಗೆ ಗೋಪಾಲ ಕೃಷ್ಣ ಗೋ ಶಾಲೆಗೆ ಹೋಗಿ ಪಂಚರಾದ 4 ಮತ್ತು 5 ರವರನ್ನು ಕರೆಯಿಸಿ ಮೃತ ಜಾನುವಾರುಗಳ ಪಂಚನಾಮೆಯನ್ನು ಗಣಕೀಕೃತ ಮಾಡಿದ್ದು ಬೆಳಿಗ್ಗೆ 11. 30 ರಿಂದ 12.30 ಗಂಟೆಯವರೆಗೆ ಪಂಚನಾಮೆ ಮಾಡಿದ್ದು ಇರುತ್ತದೆ.

**ಪಾಟೀ ಸವಾಲು : ಆರೋಪಿ ಪರ ಶ್ರೀ ಎ ಆರ್ ಎಸ್ ವಕೀಲರಿಂದ,**

ಪಂಚನಾಮೆಯನ್ನು ನಾನು ಗುನ್ಹಾ ಸ್ಥಳದಲ್ಲಿ ಗಣಕೀಕೃತ ಮಾಡಿರುತ್ತೇನೆ. ನಿಪಿ– 3 ಪೊಟೋದಲ್ಲಿ ನಾನು ಹಾಗೂ ಪ್ರಿಂಟರ್ ಕಾಣುತ್ತಿಲ್ಲ. ಪಂಚನಾಮೆ ಮೇಲೆ ನಾನು ಸಹಿ ಮಾಡಿದ್ದು ಇರುವುದಿಲ್ಲ. ಪಂಚನಾಮೆಯನ್ನು ನಾನು ಗಣಕೀಕೃತಗೊಳಿಸಿದ ಬಗ್ಗೆ ತೋರಿಸಲು ಯಾವುದೇ ದಾಖಲೆ ಇಲ್ಲಾ ಆದರೆ ನಾನು ಹೇಳಿಕೆ ನೀಡಿರುತ್ತೇನೆ. ನಾನು ಯಾವುದೇ ಹೇಳಿಕೆ ನೀಡಿಲ್ಲಾ ಎಂದರೆ ಸರಿಯಲ್ಲ. ಪಿರ್ಯಾದಿದಾರರು ನಮ್ಮ ಮೇಲಾಧಿಕಾರಿಯಾದ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪಂಚನಾಮೆಯಲ್ಲಿ ಮೃತ ಪಟ್ಟ ಜಾನುವಾರದ

ಬಣ್ಣ ಬರೆದಿರುತ್ತೇನೆ ಆದರೆ ವಯಸ್ಸಿನ್ನು ಬರೆದಿಲ್ಲಾ. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲಾ ವಿಷಯ ಸುಳ್ಳು ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

ಸಹಿ ಇದೆ

**ಪ್ರ.ದ.ನ್ಯಾ.ದಂ., ಭಟ್ಕಳ.**